

## ಬಯಲು ಬೆಡಗಿನ ಶಿವಲಿಂಗ

ನಮ್ಮ ದೇಶದ ಆಸ್ತಿಕ ಮಹಾಶಯರು ಜೀವನ ಸಾರ್ಥಕತೆಗೆ ಪರಮಾರ್ಥ ಕಂಡುಕೊಳ್ಳಲು ಶಿವಲಿಂಗ ದರ್ಶನಕ್ಕಾಗಿ ಕಾಶಿ, ರಾಮೇಶ್ವರ, ಕೇದಾರ, ಬದರೀನಾಥ, ಹಿಮಲಿಂಗದರ್ಶನ, ಕಾಶ್ಮೀರ, ಹಿಮಾಲಯ ಇಲ್ಲಿಗೆ ಕಾಲ್ನಡಿಗೆ, ಕುದುರೆ, ಕತ್ತೆ ಡೋಲಿಗಳ ಸಹಾಯ ಪಡೆದು ಕಣ್ತುಂಬಿಕೊಂಡು ಕೃತಾರ್ಥರಾಗುತ್ತಾರೆ.

ಬನ್ನಿ ನಮ್ಮ ಚಿತ್ರದುರ್ಗಕ್ಕೆ ಶಿವಾಲಯಗಳ ಸಂತೆ ನನ್ನ ಗಣತಿಯಂತೆ 37 ಶಿವಾಲಯಗಳು ನಾಲ್ಕು ಮಠಗಳು ಇದ್ದು ಅವು ಹೊರತುಪಡಿಸಿ ಬೆಟ್ಟಕಾನನದಲ್ಲಿ ಎಲ್ಲೆಂದರಲ್ಲಿ ಅದೆಷ್ಟೋ. ಇವೆಲ್ಲ ಪಾಳೇಗಾರರ ಕಾಲಮಾನಕ್ಕಿಂತ ಮುಂಚೆ ಆದವುಗಳು. ನಂತರ ಬಂದ ಮದಕರಿಗಳು ಇವುಗಳನ್ನು ಪೋಷಿಸಿದರು. ಶಿವಭಕ್ತರಾಗಿದ್ದ ಅವರ ಲಲಾಟದಲ್ಲಿ ಯಾವಾಗಲೂ ವಿಭೂತಿ ರಾರಾಜಿಸುತ್ತಿರುವುದನ್ನು ನೋಡಬಹುದು. ಈ ಬಯಲು ಶಿವಲಿಂಗ ಚಂದ್ರವಳ್ಳಿಯ ಬಯಲಿನ ದವಳಪ್ಪನ ಗುಡ್ಡದ ತುತ್ತ ತುದಿಯಲ್ಲಿದೆ. ಸಾವಿರಾರು ಅಡಿ ಎತ್ತರದಲ್ಲಿ ಆಜುಬಾಜು ಇಂತಹ ಚಿಕ್ಕಪುಟ್ಟ ಲಿಂಗಗಳು ಇವೆ. ಭೂತಕಾಲದಲ್ಲಿ ಈ ಲಿಂಗವು ಪೂಜಾವಿಧಾನಗಳ ಸೌಭಾಗ್ಯ ಕಂಡಿರಬಹುದೇ? ಈಗ ಮಳೆ ಗಾಳಿ ಬಿಸಿಲೆನ್ನದೆ ತನ್ನ ಇರುವಿಕೆಯನ್ನು ನಿಗೂಢದಲ್ಲಿಟ್ಟಿದೆ. ಈ ಛಾಯಾಚಿತ್ರ ನಮ್ಮ ಚಾರಣ ಪ್ರಿಯರ ಬಳಗದ ದಿನೇಶ್ ಕ್ಲಿಕ್ಕಿಸಿದ್ದಾರೆ. ಜನ ಸಾಮಾನ್ಯರಿಗೆ ಇದರ ದರ್ಶನ ದುರ್ಲಭ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ



## ಇದು ದಾವಣಗೆರೆಯ 'ಫಿರಂಗಿ ಗಾಡಿ'

**1942**ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಸುಮಾರು 5 ಅಡಿ ಉದ್ದ ಹಾಗೂ 3 ಅಡಿ ಅಗಲದ ಸುಸಜ್ಜಿತ 'ಫಿರಂಗಿ ಗಾಡಿ'ಯನ್ನು ದಾವಣಗೆರೆ ಸಿಟಿ ಕಾರ್ಪೊರೇಷನ್ ಕಚೇರಿ ಆವರಣದಲ್ಲಿ ಕಾಣಬಹುದು. ಆದರೆ ಈ ಫಿರಂಗಿ ಗಾಡಿಯ ಬಗ್ಗೆ ಹೆಚ್ಚಿನ ವಿವರ ದೊರಕುವುದಿಲ್ಲವಾದ ಕಾರಣ, ಇದಕ್ಕೆ ಸಂಬಂಧಪಟ್ಟ ಪುರಾತತ್ವ ಇಲಾಖೆ, ಈಗಲಾದರೂ ಈ ಫಿರಂಗಿ ಬಗ್ಗೆ ಮಾಹಿತಿ ಫಲಕ ಹಾಕಿದರೆ, ಆಸಕ್ತರಿಗೂ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೂ ಹೆಚ್ಚಿನ ಅನುಕೂಲವಾಗಲಿದೆ.

—ಜಿ. ರಾಜಣ್ಣ, ದಾವಣಗೆರೆ